# ಕಾಫ್ಕನ ಕಥೆ

■ ಟಿ.ಎಸ್. ರಾಜೇಂದ್ರಪ್ರಸಾದ್



ಪ್ರೇಗ್‌ನಲ್ಲಿನ ಕಾಫ್ಕಾನ ಪ್ರತಿಮೆ

'ಕವಿಯ ಮನಸು ಕಡಲಿನಂತೆ' ಎಂಬ ಕವಿವಾಣಿಯನ್ನು ನೆನಪಿಸಿಕೊಂಡಾಗಲೆಲ್ಲಾ ಆ ಹುಡುಗ ನೆನಪಿಗೆ ಬರುತ್ತಾನೆ. ಸುಮಾರು ಒಂದು ನೂರಾ ಇಪ್ಪತ್ತೈದು ವರ್ಷಗಳ ಹಿಂದೆ ಅಂದಿನ ಆಸ್ಟ್ರಿಯಾ–ಹಂಗೇರಿಯ ಪ್ರೇಗ್ ಎಂಬ ನಗರದ ಒಂದು ಕಡೆ ಆ ಬಾಲಕ ಜನಿಸುತ್ತಾನೆ. ಸಣಕಲ, ಅಷ್ಟೇನು ಚಂದವಿಲ್ಲದ ಹುಡುಗನವ. ಆದರೆ ಓದಿನಲ್ಲಿ ಅಪಾರ ಆಸಕ್ತಿ. ಅವನಿಗೆ ಆಟಗಳು ಇಷ್ಟವಾಗುತ್ತಿರಲಿಲ್ಲ. ಪುಸ್ತಕಗಳನ್ನು ಕಂಡರೆ ಬಹಳ ಪ್ರೀತಿ. ಅಗಲವಾದ ದೊಡ್ಡ ಕಣ್ಣು, ಕಿವಿಗಳ ಆ ಹುಡುಗನನ್ನು ಸುಂದರ ಎಂದು ಯಾರು ಕರೆದಾರು?

ಅಪ್ಪನನ್ನು ಕಂಡರೆ ಭಯ ಆ ಹುಡುಗನಿಗೆ. ಆದರೆ ಅಪ್ಪನ ಕಂಡರೆ ಅಷ್ಟೇ ಪ್ರೀತಿಯಿತ್ತು. ಹೀಗಿರುವಾಗ ಭಯದ ನೆರಳಿನಲ್ಲೇ ಬೆಳೆ ಬೆಳೆಯುತ್ತಾ ಹೋಗುತ್ತಾನೆ. ಅವನ ಹೆಸರೇ ವಿಚಿತ್ರ. ಅವನೇ ಫ್ರಾನ್ಸ್ ಕಾಫ್ಕ. ಅವನನ್ನು 'ಕಾಫ್ಕ' ಎಂದು ಜನರು ಕರೆಯುತ್ತಿದ್ದರು. ಅವನು ಸಣ್ಣವನಿರುವಾಗ ಒಂಟಿಯಾಗಿಯೇ ಬೆಳೆದ.

ಕಾಫ್ಕನಿಗೆ ಅಪ್ಪನನ್ನು ಕಂಡರೆ ಭಯವಿದ್ದ ಕಾರಣ ಅವನ ಹತ್ತಿರ ಮಾತಾಡಲೂ ಸಾಧ್ಯವಾಗಲಿಲ್ಲ. ಒಂದು ದಿನ ಏನಾದರೂ ಮಾಡಿ ಅಪ್ಪನನ್ನು ಮಾತನಾಡಿಸಬೇಕೆಂದು 'ನೀರು ಬೇಕೆಂದು' ಸರಿ ರಾತ್ರಿಯಲ್ಲಿ ಒಂದು ದಿನ ಬಿಕ್ಕಿ ಬಿಕ್ಕಿ ಅತ್ತನು. ಆದರೆ ಅವನಿಗೆ ನೀರು ಬೇಕಿರಲಿಲ್ಲ. ಅಪ್ಪನನ್ನು ಮಾತನಾಡಿಸಿ ಸಂತೋಷಪಡಲು ಬಾಯಾರಿಕೆಯ ತಂತ್ರ ಹೂಡಿದ. ಅವನ ಶ್ರಮ ಫಲಿಸಲಿಲ್ಲ. ಅದಕ್ಕೆ ತಕ್ಕ ಶಿಕ್ಷೆ ಅನುಭವಿಸಿದನು.

ಯಾವ ತಂದೆ ತನ್ನ ಮಕ್ಕಳನ್ನು ಪ್ರೀತಿಯಿಂದ ಮಾತನಾಡಿಸದೇ, ಮುದ್ದು ಮಾಡದೇ, ಹಾಗೂ ಅವರಿಗೆ ಅವಶ್ಯವಾದ ಪ್ರೀತಿಯನ್ನು ನೀಡದಿದ್ದರೆ ಮಕ್ಕಳು ಒಂಟಿಯಾಗುತ್ತಾರೆ, ವೇದನೆ ಪಡುತ್ತಾರೆ ಎನ್ನುವುದಕ್ಕೆ ಕಾಫ್ಕ ಸಾಕ್ಷಿಯಾದ.

ಕಾಫ್ಕನ ಅಪ್ಪನಿಗೂ ಒಂದು ಆಸೆಯಿತ್ತು. ಅದೇನೆಂದರೆ ತನ್ನ ಮಗ ವ್ಯಾಪಾರವನ್ನು ಚೆನ್ನಾಗಿ ಕಲಿತು ಮುಂದೆ ಬರಬೇಕೆಂದು, ಒಬ್ಬ ದೊಡ್ಡ ಮರ್ಚೆಂಟ್ ಆಗಿಸಲು ಮಹದಾಸೆ ಇಟ್ಟುಕೊಂಡಿದ್ದನು. ತಂದೆಯ ಆಸೆಗಳಿಗೆ ಮಗ ತಣ್ಣೀರೆರಚಿದನು. ಕಾರಣ ಕಾಫ್ಕನಿಗೆ ವ್ಯಾಪಾರಿ ಆಗುವ ಆಸೆ ಇರಲಿಲ್ಲ. ಮಗನ ನಿರ್ಲಿಪ್ತತೆಯು ಅಪ್ಪನ ತಿರಸ್ಕಾರವನ್ನು ಇಮ್ಮಡಿಸಿತು.

ಯಾವಾಗ ತನ್ನ ತಂದೆಯ ಪ್ರೀತಿ ಆದರಗಳನ್ನು ಕಳೆದುಕೊಂಡನೋ ಕಾಫ್ಕನಿಗೆ ಮನೆ ಬೇರೆ ರೀತಿಯಲ್ಲಿ ಕಾಣತೊಡಗಿತು. ಏಕಾಂತವಾಗಿ, ಆಗಂತುಕನಾಗಿ ಮನಸ್ಸಿನ ನೋವು ಹಿಂಡುವ ವಾತಾವರಣದಲ್ಲಿ ಬೆಳೆದನು. ಒಮ್ಮೊಮ್ಮೆ ತಾನೂ ಏನೋ ಅಪರಾಧ ಮಾಡಿರುವೆನೆಂಬ ಭಾವನೆ ಚುಚ್ಚತೊಡಗಿತು ಕಾಫ್ಕನಿಗೆ. ಅವನ ಮನಸ್ಸಿನಲ್ಲಿ ಭಯ, ಹಿಂಸೆ ದಿಗ್ಭ್ರಮೆಗಳು ಗೋಚರಗೊಂಡವು.

ಆತಂಕದ ನಡುವೆಯೂ ಚೆನ್ನಾಗಿ ಓದಿ ಡಾಕ್ಟರೇಟ್ ಪಡೆದ. ತನ್ನ ನೋವು, ದುಃಖ ಅವಮಾನ ಎಲ್ಲದರ ಪರಿಣಾಮವಾಗಿ ಹಾಗೂ ಪ್ರೇರಣೆಯಾಗಿ 'ದಿ ಟ್ರಯಲ್' ಎಂಬ ಕಾದಂಬರಿಯನ್ನು ಬರೆದು ತನ್ನ ಸ್ನೇಹಿತರ ಮುಂದೆ ಓದಿದ. ಆ ಕಾದಂಬರಿ ಕೇಳಿಸಿಕೊಂಡ ಸ್ನೇಹಿತರು ನಕ್ಕುಬಿಟ್ಟರು. ಆಗ ಕಾಫ್ಕನಿಗೆ ನೋವಾದದ್ದು ಅಷ್ಟಿಷ್ಟಲ್ಲ. ಆದರೆ ಅವನ ನೋವನ್ನು ಯಾರು ಗಮನಿಸಲೇ ಇಲ್ಲ. ಆಗಲೇ ಅವನು ತನ್ನ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡುಬಿಟ್ಟ.

ಹೊಟ್ಟೆಪಾಡಿಗಾಗಿ ಕಾಫ್ಕ ಕಂಪನಿಯೊಂದರಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿದ. ಆ ಕೆಲಸದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸಿದ್ದ. ಈ ವಿಷಯ ತಿಳಿದ ಅವನ ಪ್ರಾಣ ಸ್ನೇಹಿತ ಬ್ರಾಡ್ ಎಂಬುವನು, ಕಾಫ್ಕನ ತಾಯಿಗೆ ಹೇಳಿ ಆ ಕೆಲಸವನ್ನು ಬಿಡುವಂತೆ ಮಾಡಿದನು.

ತನ್ನ ಮೇಲೆ ವಿಶ್ವಾಸವನ್ನು ಇರಿಸಿಕೊಳ್ಳದೇ ಬದುಕುತ್ತಾ ತನ್ನ ನೋವು–ನಲಿವುಗಳನ್ನೇ ಆಧರಿಸಿ ಕಾಫ್ಕ ಕೆಲವೇ ಕೆಲವು ಕೃತಿಗಳನ್ನು ರಚಿಸಿದ. ಅವು ಮೂರು ಕಾದಂಬರಿಗಳು, ಕೆಲವು ಕಥೆಗಳು. ಆದರೆ ಅವನು ಯಾವ ಪತ್ರಿಕೆಗಳಿಗೂ ಕಳುಹಿಸದೇ ಅವು ಅಷ್ಟೇನು ಚೆನ್ನಾಗಿಲ್ಲವೆಂದು ಇಟ್ಟುಕೊಂಡಿದ್ದನು.

ಕೆಲವು ಸಮಯದ ನಂತರ ಅವನು ಕಾಯಿಲೆ ಬಿದ್ದ. ಇನ್ನೇನು ಸಾವು ತನ್ನ ಹತ್ತಿರ ಸರಿಯುವಾಗ ತನ್ನ ಸ್ನೇಹಿತನಿಗೆ ತಾನು ಬರೆದ ಕಥೆ, ಕಾದಂಬರಿಯ ಕಟ್ಟನ್ನು ಕೊಟ್ಟು, 'ನಾನು ಸತ್ತ ನಂತರ ಎಲ್ಲವನ್ನೂ ಸುಟ್ಟು ಹಾಕು' ಎಂದು ಹೇಳಿ ಪ್ರಾಣ ಬಿಟ್ಟನು.

ಕಾಫ್ಕನ ಗೆಳೆಯ ಕುತೂಹಲದಿಂದ ಆ ಬರಹಗಳನ್ನು ಓದಿದ. ಅತ್ಯಂತ ಶ್ರೇಷ್ಠವೆಂದು ಅರಿತು ಅಲ್ಲಿನ ಪತ್ರಿಕೆಗಳಿಗೆ ಕಳುಹಿಸಿದ. ಎಲ್ಲವೂ ಪ್ರಕಟವಾದವು ಒಂದರ ಮೇಲೆ ಒಂದರಂತೆ. ಓದುಗರ ಸಂಖ್ಯೆ ಹೆಚ್ಚಿತು. 'ಆ ಯುಗದ ನೋವಿನ ಹರಿಕಾರ' ಎಂದು ವಿಮರ್ಶಕರು ವಿಮರ್ಶೆ ಬರೆದರು.

ಕಾಫ್ಕನ 'ರೂಪಾಂತರ' ಕಾದಂಬರಿಗೆ ನೊಬೆಲ್ ಪ್ರಶಸ್ತಿ ಪ್ರಕಟವಾಯಿತು. ವಿಶ್ವವೇ ಬೆರಗಾಯಿತು. ಕಾಫ್ಕನ ಸ್ನೇಹಿತನನ್ನು ಜಗತ್ತೇ ಅಭಿನಂದಿಸಿತು. ■